# ಎ.ಜೆ.ಇಂಜಿನಿಯರಿಂಗ್ ಕಾಲೇಜಿನಲ್ಲಿ ಓಣಂ ಕಾರ್ಯಕ್ರಮ

ಲಕ್ಷ್ಮೀ ಮೆಮೋರಿಯಲ್ ಎಜುಕೇಷನ್ ಟ್ರಸ್ಟ್, ಮಂಗಳೂರು ಇದರ ಅಂಗಸಂಸ್ಥೆಯಾದ ಎ.ಜೆ.ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇತ್ತೀಚಿಗೆ ಓಣಂ ಕಾರ್ಯಕ್ರಮವು ಕಾಲೇಜಿನ ಆವರಣದಲ್ಲಿ ಜರುಗಿತು. ಹೂವಿನ ರಂಗೋಲಿಯು ಕಾರ್ಯಕ್ರಮದ ಆಕರ್ಷಣೆಯ ಬಿಂದುವಾಗಿತ್ತು. ಚಂಡೆವಾದನದ ಮೂಲಕ ಆಗಮಿಸಿದ ಓಣಂ ಹಬ್ಬದ ಪ್ರತೀಕವಾದ ಮಹಾಬಲಿಯನ್ನು ಎಲ್ಲಾ ಶಿಕ್ಷಕ ಮತ್ತು ಶಿಕ್ಷಕೇತರ ವೃಂದದವರು ಸ್ವಾಗತಿಸಿದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಪ್ರಾಂಶುಪಾಲರಾದ ಡಾ. ಶಾಂತಾರಾಮ ರೈ ಸಿ. ಯವರು ಮಾತನಾಡಿ ಎಲ್ಲರಿಗೂ ಓಣಂ ಹಬ್ಬದ ಶುಭಾಶಯವನ್ನು ತಿಳಿದರು. ಓಣಂ ಕಾರ್ಯಕ್ರಮದ ಸಮಸ್ತ ಉಸ್ತುವಾರಿಯನ್ನು ಸಾಂಸ್ಕೃತಿಕ ಮತ್ತು ಸಾಹಿತ್ಯಕ ಸಮಿತಿಯ ಅಧ್ಯಕ್ಷರಾದ ಡಾ. ಶೋಭಿತಾ ಶೆಟ್ಟಿಯವರು ನಿರ್ವಹಿಸಿದರು. ಉಪನ್ಯಾಸಕರಾದ ಶ್ರೀ ದಿಲೀಪ್ ಕುಮಾರ್ ಮತ್ತು ಶ್ರೀಮತಿ ಬಿನ್ಸೀ ಜೋಸೆಫ್ ಕಾರ್ಯಕ್ರಮ ಸಂಯೋಜಿಸಿದರು. ವಿದ್ಯಾರ್ಥಿಗಳಾದ ಸೇತು ಪಿಲ್ಯೆ ಮತ್ತು ಕುಮಾರಿ ಮಿಲನ್ ಬೆನ್ನಿ ಕಾರ್ಯಕ್ರಮ ನಿರೂಪಿಸಿದರು.



